ಹಸನೊಂದು ನುಡಿಯಲ್ಲಿ ನಡೆಯಲ್ಲಿ ನೋಟದಲಿ ।
ಪಸರುತಿರೆ ಬಾಳ್ ಚೆಲುವು ಮಂಕುತಿಮ್ಮ ॥

ಸಾವಿನ ಸಮ್ಮುಖದಲ್ಲಿ ಬಾಳಿನ ಹೊಸತನವನ್ನು ಕಂಡುಕೊಂಡ ಆ ಮುದುಕ.

ಮನಸ್ಸು ಉದ್ವೇಗದಲ್ಲಿದ್ದಾಗ, ಅಸಹಾಯಕವಾಗಿದ್ದಾಗ ಅವಾಸ್ತವವಾಗಿ ಯೋಚಿಸುತ್ತೇವೆ; ಅನೌಚಿತ್ಯವಾಗಿ ನಡೆದುಕೊಳ್ಳುತ್ತೇವೆ; ಆಗ್ರಹದಿಂದ ಕೂಗಾಡುತ್ತೇವೆ; ದೈನ್ಯದಿಂದ ಮಾತನಾಡುತ್ತೇವೆ; ಸೋಲಿನಿಂದ ಕುಸಿಯುತ್ತೇವೆ. ಒಟ್ಟಿನಲ್ಲಿ ಇಡಿಯ ನಮ್ಮ ವ್ಯಕ್ತಿತ್ವವವೇ ಹಂತ ಹಂತವಾಗಿ ಕುಸಿಯುತ್ತಿರುತ್ತದೆ. ಇದೇ ಸಾವು. ಸಂಸ್ಕೃತಸುಭಾಷಿತವೊಂದು ಹೀಗೆ ಸಾರುತ್ತಿದೆ:

ಆಯುಃಕ್ಷಣಲವಮಾತ್ರಂ ನ ಲಭ್ಯತೇ ಹೇಮಕೋಟಿಭಿಃ ಕ್ವಾಪಿ ।
ತಚ್ಚೇದ್ಗಚ್ಛತಿ ಸರ್ವಂ ಮೃಷಾ ತತಃ ಕ್ಯಾಧಿಕಾ ಹಾನಿಃ ॥

‘ಕೋಟಿ ಕೋಟಿ ಬಂಗಾರದ ನಾಣ್ಯಗಳನ್ನು ಸುರಿದರೂ ಕೂಡ ನಮ್ಮ ಆಯುಸ್ಸಿನ ಒಂದು ಕ್ಷಣಮಾತ್ರದಷ್ಟು ಕೂಡ ಸಿಗುವುದಿಲ್ಲ. ಹೀಗಿರುವಾಗ ಸಂಪೂರ್ಣ ಆಯುಸ್ಸೇ ವ್ಯರ್ಥವಾಗಿ ಕಳೆದರೆ ಅದಕ್ಕಿಂತ ಹೆಚ್ಚಿನ ಹಾನಿ ಯಾವುದಿದ್ದೀತು?’ ಇದು ಈ ಪದ್ಯದ ತಾತ್ಪರ್ಯ.

ಸಾವನ್ನು ಗೆಲ್ಲುವ ಮಾರ್ಗವೆಂದರೆ ಬದುಕನ್ನು ಒಪ್ಪಿಕೊಳ್ಳುವುದು. ಬದುಕನ್ನು ಒಪ್ಪಿಕೊಳ್ಳುವುದು ಎಂದರೆ ಜೀವನದ ಸೌಂದರ್ಯವನ್ನು, ಅದರ ಎಲ್ಲ ಮುಖಗಳಿಂದಲೂ, ಸವಿಯುವುದು. ಇದೇ ರಸದ ದಾರಿ. ‘ರಸವೇ ಜನನ ವಿರಸವೇ ಮರಣ ಸಮರಸವೇ ಜೀವನ’. ರಸಾನುಭವಕ್ಕೆ ಬೇಕಾದುದು ತಾದಾತ್ಮ್ಯ; ಜೀವನದ ಗಾಢಾಲಿಂಗನ; ಎಲ್ಲ ಕ್ಷಣಗಳೊಂದಿಗೆ ತಲ್ಲೀನತೆ (ರಸವೇ ಜನನ). ಇಂಥ ಏಕಾಗ್ರತೆಯಿಂದ ದೂರ ಸರಿದ ಮನೋಧರ್ಮವೇ ಸಾವು (ವಿರಸವೇ ಮರಣ). ಜೀವನದಲ್ಲಿ ಸುಖವೂ ಇದೆ, ದುಃಖವೂ ಇದೆ; ಹಿತವೂ ಇದೆ, ಅಹಿತವೂ ಇದೆ. ಈ ಹಿತಾಹಿತಗಳ ನಡುವೆ ಸಾಧಿಸುವ ಮನಸ್ಸಿನ ಪಾಕವೇ ಜೀವನದ ಸೌಂದರ್ಯವನ್ನು ಕಾಣಿಸಬಲ್ಲದು (ಸಮರಸವೇ ಜೀವನ). ಸಮರಸವನ್ನು ಸಾಧಿಸಿದ ವ್ಯಕ್ತಿತ್ವ ಮಾತ್ರವೇ ಜೀವನದಲ್ಲಿ ರಸಸೃಷ್ಟಿಯನ್ನು ಸಾಧಿಸಲು ಸಾಧ್ಯ. ಅಂಥ ರಸರ್ಷಿಗಳನ್ನು ನಮ್ಮ ಪೂರ್ವಜರು ‘ಕವಿ’ ಎಂಬ ಪದದಲ್ಲಿ ಕಂಡಿದ್ದಾರೆ. ಅಂಥವರು ಭೌತಿಕವಾಗಿ ಕಣ್ಮರೆಯಾದರೂ ಅವರ ಯಶಸ್ಸು ಎನ್ನುವ ರಸಶರೀರ ಸದಾ ಬೆಳಗುತ್ತಲೇ ಇರುತ್ತದೆ; ಉಳಿದವರಿಗೆ ಅದು ದಾರಿದೀಪವಾಗಿಯೇ ಉಳಿಯುತ್ತದೆ.

ಜಯಂತಿ ತೇ ಸುಕೃತಿನೋ ರಸಸಿದ್ಧಾಃ ಕವಿಶ್ವರಾಃ ।
ನಾಸ್ತಿ ಯೇಷಾಂ ಯಶಃಕಾಯೇ ಜರಾಮರಣಜಂ ಭಯಮ್ ॥

‘ಯಾವ ಕವಿಶ್ವರರ ಯಶಸ್ಸು ಎಂಬ ಶರೀರಕ್ಕೆ ಮುಪ್ಪು–ಸಾವುಗಳ ಭಯವಿಲ್ಲವೋ ಅಂಥ ರಸಸಿದ್ಧರು ಪುಣ್ಯವಂತರು, ಜಯಶಾಲಿಗಳು.’

ಎಂದಾದರೂ ಸಾವನ್ನು ಕಾಣಲೇಬೇಕಾದುದು ನಮ್ಮ ಶರೀರಧರ್ಮ; ಆದರೆ ಅದು ಎಂದಿಗೂ ಬದುಕಿರಬಲ್ಲ ಸಾಧ್ಯತೆಯ ಗುಟ್ಟನ್ನು ಭರ್ತೃಹರಿಯ ಈ ಪದ್ಯ ಹೇಳಿದೆ.

✿